ಮೋಹನ ರು. ಹಣಗಿ, ಅಮೀನಗಡ

*ಸಿನಿಮಾ ನಟನಿಗೂ, ರಾಜಕಾರಣಿಗೂ ಏನು ಅಂತರ ಸ್ವಾಮಿ?*



ಒಬ್ಬ ಬಣ್ಣ ಬಳಿದುಕೊಳ್ಳುತ್ತಾನೆ; ಇನ್ನೊಬ್ಬ ಬಣ್ಣ ಬದಲಾಯಿಸುತ್ತಾನೆ.

ಮಹಾವೀರ ಕಾಸರ, ಶಿವಮೊಗ್ಗ

*ದುಃಖತಪ್ತ ಸೀತೆ ಇರುವುದು ಅಶೋಕವನ ಹೇಗಾದೀತು?*

ತಪ್ಪೇನಿಲ್ಲ. ಆಕಾಶ ಅತ್ತಾಗ ಬೆಳೆದ ವನದಲ್ಲಿ (ಅಶೋಕ ಮಳೆಕಾಡಿನಲ್ಲಿ ಬೆಳೆವ ಮರ) ದುಃಖತಪ್ತೆ ಕುಳಿತದ್ದು ಮ್ಯಾಚಿಂಗೇ.

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಸಾಧಕರಿಗೆ ಶಾಲೆ ಬೇಕೆ?*

ಕನಿಷ್ಠ ಪಕ್ಷ ಅಶ್ವಶಾಲೆ (ರೇಸ್‌ಕೋರ್ಸ್), ಅಥವಾ ಪರ್ಣಶಾಲೆ (ಪರ್ಣ=ಎಲೆ=ಇಸ್ಪೀಟೆಲೆ)ಯಾದರೂ ಬೇಕಂತೆ.

ವಿ. ಹಮೀದ್, ವಿಟ್ಲ

*ಹನಿಮೂನ್‌ಗೆ ಹೋಗಲು ಬೆದರುತ್ತಿರುವ ನವವರನಿಗೆ ನಿಮ್ಮ ಸಲಹೆ?*



ಗಂಡನೆಂಬ ನೌಕರಿಗೆ ಹನಿಮೂನೇ ತರಬೇತಿ ಶಿಬಿರ. ಎಚ್ಚರ! ಪಾಸಾದರೆ ಗೃಹಚರ, ಫೇಲಾದರೆ ಗ್ರಹಚಾರ.

ಬಸವಣ್ಣ ಹೊನಖಾಂಡೆ, ಬಸವನಬಾಗೇವಾಡಿ

*ಗಂಡಸಿನ ಕಂಗಳಿಂದ ನೀರು ಬರುವುದು ಯಾವಾಗ?*

ಮಡದಿ ಮಾಡಿಕೊಟ್ಟ ಖಾರದವಲಕ್ಕಿ ತಿನ್ನುವಾಗಲೇ ಕಣ್ಣು ನವೆಯಾಗಿ ತುರಿಸಿಕೊಂಡಾಗ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

*ಪ್ರಾಣಿದಯಾಸಂಘದ ಸ್ತ್ರೀಯರು ಪ್ರಾಣಿಗಳಂತೆಯೇ ಬೆತ್ತಲಾಗಿ ಪ್ರತಿಭಟಿಸುವ ಚಿತ್ರಗಳು ದಿನಪತ್ರಿಕೆಯಲ್ಲಿ ಬರಲು ಕಾರಣ?*

ನಗ್ನಸತ್ಯವನ್ನು ಪ್ರೀತಿಸುವವರಿಂದ ಪತ್ರಿಕೆಗಳ ಮಾರಾಟ ಹೆಚ್ಚುವುದಲ್ಲ!

ಹೇಮಾವತಿ ಜೈನ್, ಹೂವಿನಹಡಗಲಿ

*ಹೆಚ್ಚು ಲಗೇಜ್ ಇದ್ದರೂ, ನೀವು ಹೇಳಿದಿರಿ ರೈಲು ಬೋಗಿ ಪ್ರಯಾಣ ಸುಖಕರ. ಏನಿದರ ರಹಸ್ಯ ರಾಮ್?*

ಮನಸ್ಸು ಉಲ್ಲಾಸಗೊಂಡಾಗ ಲಗೇಜ್ ಭಾರ ಎನಿಸದಿರುವುದೇ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಓದುಗರಿಗೂ, ಪತ್ರಿಕೆಗೂ ಸೇತುವೆಯಂತಿರುವ ಈ ಅಂಕಣ ಸಹ ರಾಮ್ ಸೇತುವೆಯೆ?*

ಊಹೂಂ. ರಾಮ್ ಈ ಮಹಾನ್ ಜಗ್ಗದ ಹಗ್ಗದ ಸೇತುವೆಗೆ ಬಳಸಲ್ಪಟ್ಟ ಒಂದು ಚಿಕ್ಕ ಹಗ್ಗವಷ್ಟೆ.

ವಿ. ಜಯವಂತ ಪೈ, ಕುಂದಾಪುರ

*ಸಣ್ಣ ದೇಗುಲಗಳ ಅರ್ಚಕರು ಸಣ್ಣ ನಾಮ, ದೊಡ್ಡ ದೇಗುಲಗಳ ಅರ್ಚಕರು ದೊಡ್ಡ ನಾಮ ಹಾಕಿಕೊಳ್ಳಲು ಕಾರಣವೇನು?*

ಅವರವರ ತಟ್ಟೆ ಕಾಸಿಗೆ ತಕ್ಕಂತೆ ಅವರವರ ನಾಮ.

ಬಿ.ಎಂ. ಶಿವಲಿಂಗೇಗೌಡ, ಬೇವಿನಹಳ್ಳಿ

*ಹೊಸ ಜಲಮಾರ್ಗಗಳನ್ನು ಕಂಡುಹಿಡಿದ ಕೊಲಂಬಸ್ ಸಂಸಾರ ಮಾರ್ಗವನ್ನೇಕೆ ಕಂಡುಹಿಡಿಯಲಿಲ್ಲ?*

ಒಡಪಾಯಿಯ ಬಳಿ ವಯಸ್ಸಿನ ಕಾಂತೆಯ ಬದಲು ಅಯಸ್ಕಾಂತ ಮಾತ್ರ ಇತ್ತಂತೆ.

ಎಂ.ಎನ್. ಸೋಮಶೇಖರ್, ಮೈಸೂರು

*ಒಳ್ಳೆಯ ವ್ಯಕ್ತಿಗಳು ಏಕೆ ಚಿಕ್ಕ ವಯಸ್ಸಿನಲ್ಲೇ ಸಾಯುತ್ತಾರೆ?*

ಕೆಟ್ಟ ಕೆಲಸ ಮಾಡಲು ಅಗತ್ಯವಾದ ವಯಸ್ಸಾಗುವಷ್ಟು ಕಾಲ ಬದುಕಿರದ ಏಕೈಕ ಕಾರಣ.

ಅನಂತಪದ್ಮನಾಭ ಹೆಚ್.ಎಂ., ಮೈಸೂರು

*ಉದ್ಘಾಟನೆಗೂ, ಉಚ್ಚಾಟನೆಗೂ ನಡುವೆ ಇರುವ ಸಂಬಂಧವೇನು?*

ಎರಡೂ ಸಂದರ್ಭಗಳಲ್ಲಿ ಬತ್ತಿ ಇಡುವುದು, ಕಡ್ಡಿ ಗೀರುವುದು ಕಾರಣವಾಗಿರುತ್ತದೆ.

## ಬಹುಮಾನಿತ ಪ್ರಶ್ನೆ

ಜಾಕೋಬ್ ಡಿಸೋಜ, ಕುರುವಳ್ಳಿ

*ಕೆಲವರು ಕಷ್ಟದಲ್ಲೇ ಇರುತ್ತಾರೆ. ಕೆಲವರು ಸುಖದಲ್ಲೇ ಇರುತ್ತಾರೆ. ಯಾಕೆ ಸಾರ್ ಹೀಗೆ?*

ಅಭ್ಯಾಸಬಲ.

ಎಸ್. ಕುಮಾರಸ್ವಾಮಿ, ಚಿಕ್ಕಬಳ್ಳಾಪುರ

*ನೀವೂ ದೇವರನ್ನ ನಂಬುತ್ತೀರಾ ರಾಮ್‌ಜಿ?*

ದೇವ್ರಾಣೆ ನಂಬಲ್ಲ.

ವಿ. ಹೇಮಂತಕುಮಾರ್, ಬೆಂಗಳೂರು

*ಕೊಲೆಗೂ, ಸಂಹಾರಕ್ಕೂ ಅಂತರವೇನು?*

ಲಾಕಪ್ ಡೆತ್ ಕೊಲೆ; ಎನ್‌ಕೌಂಟರ್ ಸಂಹಾರ.

ಬಾ.ರಂ. ಸುರೇಶ್, ಶಿವಮೊಗ್ಗ

*ಹರೆಯದ ಹುಡುಗಿಯರನ್ನು ಕಂಡಕೂಡಲೆ ಎದೆ ಡವ್ ಡವ್ ಎಂದು ಜೋರಾಗಿ ಹೊಡೆದುಕೊಳ್ಳುತ್ತದಲ್ಲಾ...?*



ತಿಳಿಯಲಿಲ್ಲವೆ? ಆ ಸದ್ದು ಎದೆಯು ನಿಮಗೆ 'ಡೇಂಜರ್, ಕೀಪ್ ಡಿಸ್ಟೆನ್ಸ್' ಎನ್ನುತ್ತಿರುವ ವಾರ್ನಿಂಗ್ ಬೆಲ್.

ಹೆಚ್. ಗೋಪಿನಾಥ್, ಬಳ್ಳಾರಿ

*ವೃಕ್ಷ, ಬೀಜಗಳಲ್ಲಿ ಯಾವುದು ಮೊದಲು?*

ಸ್ಟಾರ್ಟಿಂಗ್ ಪಾಯಿಂಟ್ ಮಣ್ಣೇ ಆದುದರಿಂದ, ಬೀಜವೇ.

ಸುನಂದ ಆರ್. ರೆಡ್ಡಿ, ಗೌರಿಬಿದನೂರು

*ವಾಸ್ತು ಪ್ರಕಾರ ಯಾವ ದಿಕ್ಕಿನಲ್ಲಿ ಕುಳಿತು ನಿಮಗೆ ಪ್ರಶ್ನೆ ಬರೆದರೆ ಬಹುಮಾನಿತ ಪ್ರಶ್ನೆಯಾಗುತ್ತೆ?*

ನಿಮ್ಮ ಬೆನ್ನ ದಿಕ್ಕಿನಲ್ಲಿ ಕುಳಿತು ಯತ್ನಿಸಿ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

*ಮನುಷ್ಯರಿಗಿಂತ ಪ್ರಾಣಿಗಳೇ ಗುಣದಲ್ಲಿ ಮೇಲಂತೆ. ಏಕೆ ಹೇಳಿ?*

ವ್ಯವಹಾರ ಮಾಡುವುದಿಲ್ಲವಲ್ಲ! ವಿಶ್ವಾಸ ಮಾತ್ರ ಇರುವ ಕಡೆ ಒಳ್ಳೆಯ ಗುಣಕ್ಕೆ ಕೊರತೆ ಇರುವುದಿಲ್ಲ.

■ ರಾಮ್